## ಆಹಾ ಸುದ್ದಿ!

★ ಸಸಿತೋಟ



ಚೀನಾದ ರೈಲು ನಿಲ್ದಾಣದಲ್ಲಿ ಎಕ್ಸ್ ರೇ ಯಂತ್ರದಲ್ಲಿ ತನ್ನ ಪರ್ಸ್‌ಗೆ ಜೊತೆ ಕೊಡಲು ಅದರ ಒಡತಿಯೂ ಆ ಯಂತ್ರದೊಳಗೆ ನುಸುಳಿದ ಚಿತ್ರ ವೈರಲ್ ಆಗಿದೆ. ಬ್ಯಾಗ್, ಪರ್ಸ್ ಎಲ್ಲವನ್ನೂ ಎಕ್ಸ್ ರೇ ಯಂತ್ರದಲ್ಲಿ ಹಾಕಲು ಮೊದಲು ಒಪ್ಪದ ಆಕೆ, ಅಧಿಕಾರಿಗಳು ಗದರಿದಾಗ ತಾನೂ ಅದರೊಳಗೆ ಅಂಬೆಗಾಲಿಡುತ್ತ ನುಸುಳಿ ಹೊರಬಿದ್ದಳಂತೆ.

ಜರ್ಮನಿಯ ವಕೀಲರೊಬ್ಬರ ಕಚೇರಿಗೆ ಕಳೆದ ಕೆಲವು ದಿನಗಳಿಂದ ಪಿಜ್ಜಾ ಪಾರ್ಸಲ್‌ನಲ್ಲಿ ಬರುತ್ತಿದೆಯಂತೆ. ಯಾರು ಆರ್ಡರ್ ಮಾಡಿದ್ದು ಎಂಬುದನ್ನು ತನಿಖೆ ಮಾಡುವಂತೆ ಆ ವಕೀಲರು ಪೊಲೀಸರಿಗೆ ದೂರು ನೀಡಿದ್ದಾರಂತೆ. ಪುಕ್ಕಟೆ ಬಂದರೂ ತಿನ್ನುವ ಹಾಗೂ ಇಲ್ಲ. ಈವರೆಗೆ ನೂರಾರು ಪಿಜ್ಜಾಗಳು ಬಂದಿದ್ದು, ಹಣ ನೀಡುವ ಅವಶ್ಯಕತೆ ಇಲ್ಲ ಎಂದು ಕಂಪೆನಿ ಹೇಳಿದ್ದರಿಂದ ಸದ್ಯ ವಕೀಲರು ನಿಟ್ಟುಸಿರು ಬಿಟ್ಟಿರಬಹುದು.




ಹಕ್ಕಿಗಳನ್ನು ಓಡಿಸಲು, ಬೆಳೆಯ ಮೇಲೆ ಕೆಟ್ಟ ದೃಷ್ಟಿ ಬೀಳುವುದನ್ನು ತಡೆಯಲು ಬೆರ್ಚಪ್ಪನನ್ನು ಗದ್ದೆಯಲ್ಲಿ, ತೋಟದಲ್ಲಿ ನಿಲ್ಲಿಸುವುದು ಮಾಮೂಲು. ಆದರೆ ಆಂಧ್ರಪ್ರದೇಶದ ರೈತ ಚೆಂಚು ರೆಡ್ಡಿ ತನ್ನ 10 ಎಕರೆ ಹೊಲದಲ್ಲಿ ನಟಿ ಸನ್ನಿ ಲಿಯೋನ್ ಪೋಸ್ಟರ್ ಅನ್ನು ಅಳವಡಿಸಿ ‘ಎಲ್ಲೆಲ್ಲೋ ಯಾಕೆ ನೋಡುತ್ತೀರಿ? ನನ್ನ ಕಡೆ ನೋಡಿ’ ಎಂದು ತೆಲುಗಿನಲ್ಲಿ ಬರೆಸಿ ಹಾಕಿದ್ದಾನಂತೆ. ಕೆಟ್ಟ ದೃಷ್ಟಿ ಸನ್ನಿ ಕಡೆ ತಿರುಗಿದರೆ, ಕಾಕ ದೃಷ್ಟಿ ಬೆಳೆಗಳ ಕಡೆ ತಿರುಗಬಹುದು ಎಂಬುದು ರೆಡ್ಡಿಗೆ ತಿಳಿದಿಲ್ಲವೆನಿಸುತ್ತದೆ.



ದಕ್ಷಿಣ ಕೊರಿಯಾದ ಸ್ಯಾಮ್‌ಶೊಕ್ ಪುರುಷ ಜನನಾಂಗದ ಶಿಲ್ಪಾಕೃತಿಗಳ ಪಾರ್ಕ್. ವಿವಿಧ ಗಾತ್ರದಲ್ಲಿ ಕಲ್ಲಿನಲ್ಲಿ ಕೆತ್ತಲಾದ ಇವುಗಳಿರುವ ಪಾರ್ಕ್ ಒಲಿಂಪಿಕ್ ಗೇಮ್ಸ್ ಕ್ರೀಡಾಂಗಣದಿಂದ 40 ಕಿ.ಮೀ. ದೂರದಲ್ಲಿದೆಯಂತೆ.



ಈ ಎರಡು ಬಾರ್ ಸೋಪ್ ಬೆಲೆ ಬರೋಬ್ಬರಿ 55 ಸಾವಿರ ರೂಪಾಯಿ. ಮುಂಬೈ ಸಾಫ್ಟ್‌ವೇರ್ ಎಂಜಿನಿಯರ್ ತಬ್ರೇಜ್ ಮೆಹಬೂಬ್ ಎಂಬುವವರು ಆನ್‌ಲೈನ್ ಮಾರಾಟ ಕಂಪೆನಿಯಿಂದ ಐಫೋನ್‌ಗೆ ಆರ್ಡರ್ ಮಾಡಿದ್ದರಂತೆ. 55 ಸಾವಿರ ರೂಪಾಯಿ ಪಾವತಿಯಾಗಿತ್ತು. ಆದರೆ ಪಾರ್ಸಲ್‌ನಲ್ಲಿ ಬಂದಿದ್ದು ಬಟ್ಟೆ ತೊಳೆಯುವ ಸೋಪ್ ಮಾತ್ರ ಅಲ್ಲ, ಬ್ಯಾಂಕ್ ಅಕೌಂಟನ್ನೇ ತೊಳೆದು ಹಾಕುವ ಸೋಪ್!

ದುಬೈನಿಂದ ಆಮಸ್ಟರ್‌ಡ್ಯಾಮಿಗೆ ಹೊರಟಿದ್ದ ವಿಮಾನವನ್ನು ತುರ್ತಾಗಿ ಆಸ್ಟ್ರಿಯಾದಲ್ಲಿ ಇಳಿಸಬೇಕಾಯ್ತಂತೆ. ಕಾರಣ ವಿಮಾನದಲ್ಲಿರುವ ಒಬ್ಬಾತನಿಗೆ ಇಬ್ಬರು ಡಚ್ ಪ್ರಜೆಗಳು ಗೂಸಾ ಕೊಟ್ಟಿದ್ದು. ಕಾರಣ ಆತ ಒಂದೇ ಸಮನೆ ಅಪಾನಾವಾಯು ಬಿಡುತ್ತಿದ್ದನಂತೆ. ನಿಲ್ಲಿಸು ಎಂದರೂ ಆದೇಶ ಪಾಲಿಸಲಿಲ್ಲ ಎಂಬುದು ಹೊಡೆದಾಟಕ್ಕೆ ಕಾರಣವಂತೆ. ಪಾಪ, ವಾಯು ಪ್ರಕೋಪ ಆತನ ಆದೇಶ ಪಾಲಿಸದಿದ್ದರೆ ಅವನಾದರೂ ಏನು ಮಾಡಲು ಸಾಧ್ಯ? ಸದ್ಯ ಆ ಇಬ್ಬರು ಡಚ್ಚರೇ ಪೊಲೀಸರ ಅತಿಥಿಯಾಗಿದ್ದು, ವಾಯು ತಡೆಯಿಲ್ಲದೇ ಹೋಗುತ್ತಿರಬಹುದು.